


ಶಕ್ತಿ ಮತ್ತು ನರ್ತಕಿ ನಟರಾಜ್

ಅವನು ಕೂಡ 'ಅವಳು' ಎಂದು ಗುರುತಿಸಿಕೊಳ್ಳಲು ಬಯಸಿದ. ನನ್ನಂತೆಯೇ ಒಬ್ಬಳು ವ್ಯಕ್ತಿ ಎಂದು ಗೊತ್ತಾದ ಕೂಡಲೇ ನಾವಿಬ್ಬರೂ ಸ್ನೇಹಿತರಾದೆವು. ಆಕೆಯ ಹೆಸರು ಶಕ್ತಿ. ಅಂದಿನಿಂದ ಇಂದಿನವರೆಗೂ ಸದಾ ನನ್ನ ಜೊತೆಯೇ ಇರುವ ಆಕೆ ನನ್ನ ಜೀವನದ ಪ್ರತಿಹೆಜ್ಜೆಯಲ್ಲಿ ಜೊತೆಗಿದ್ದಾಳೆ. ದೇವಿ ಅಂಬಾಳ್ ನನ್ನನ್ನು ಕಾಪಾಡುವುದಕ್ಕೆ ಶಕ್ತಿಯ ರೂಪದಲ್ಲಿ ಬಂದಿದ್ದಾಳೆ ಎಂದು ನಾನು ನಂಬಿದ್ದೇನೆ. ಅವಳಲ್ಲಿ ಇದ್ದ ಅಲ್ಪ ಸ್ವಲ್ಪ ಹಣವನ್ನು ಆಕೆ ನನಗಾಗಿ ವ್ಯಯಿಸಿದ್ದಾಳೆ. ಅಕೆಯ ತ್ಯಾಗವಿಲ್ಲದೇ ಇದ್ದಿದ್ದರೆ ಇಂದು ನಾನು ಈ ಸ್ಥಾನದಲ್ಲಿ ನಿಲ್ಲಲು ಸಾಧ್ಯವಾಗುತ್ತಿರಲಿಲ್ಲ.

◆ **ನೀವು ಗುರುಗಳನ್ನು ಭೇಟಿಯಾದ ಬಗೆಯನ್ನು ವಿವರಿಸ್ತೀರಾ?**

ಆ ಥಿಯೇಟರ್‌ನಲ್ಲಿ ನಾನು ನೋಡಿದ ನೃತ್ಯಪಟುಗಳಾದ ಸಿನಿಮಾ ಅಭಿನೇತ್ರಿಗಳೇ ನನ್ನ ಮೊದಲ ಗುರುಗಳು. ನಿಜ ಹೇಳಬೇಕೆಂದರೆ ನಾನು ನೃತ್ಯ ಕಲಿಯುತ್ತಿದ್ದಾಗ ಅದಕ್ಕೊಬ್ಬರು ಗುರುಗಳು ಬೇಕು ಎಂದು ಗೊತ್ತಿರಲಿಲ್ಲ. ಸಿನಿಮಾದ ನೃತ್ಯಗಳನ್ನು ಕಂಡಕಂಡಲ್ಲಿ ಪ್ರದರ್ಶಿಸುತ್ತಿದ್ದೆ. ನನ್ನದೇ ನೃತ್ಯ ಭಂಗಿಯ ಕೆಲವು ಫೋಟೋಗಳನ್ನು ತೆಗೆಸಿಕೊಂಡು ಅವುಗಳನ್ನು ಆಲ್ಬಂನೊಳಗೆ ತುರುಕಿ, ಕೈಯಲ್ಲೊಂದು ಭಕ್ತಿಗೀತೆಗಳ ಕ್ಯಾಸೆಟ್ ಹಿಡಿದುಕೊಂಡು ಎಲ್ಲೆಂದರಲ್ಲಿ ಹೋಗಿ, ನೃತ್ಯ ಪ್ರದರ್ಶನಕ್ಕೆ ಒಂದು ಅವಕಾಶ ಕೊಡ್ತೀರಾ ಎಂದು ಕೇಳುತ್ತಿದ್ದೆ. ಶಾಲೆಗಳಲ್ಲಿ, ಮದುವೆಗಳಲ್ಲಿ, ಸಮಾರಂಭಗಳಲ್ಲಿ ನನಗೆ ಅವಕಾಶಗಳು ಸಿಗುತ್ತಿದ್ದವು. ಗುರು ನಮನೂರು ಜಯರಾಮನ್ ಅವರಿಂದ ತಂಜಾವೂರು ಶೈಲಿಯ ಭರತನಾಟ್ಯ ತರಗತಿಗಳಿಗೆ ಹಾಜರಾಗಿ ಸ್ವಲ್ಪ ಮಟ್ಟಿಗೆ ಕಲಿತಿದ್ದೆ. ಅಲ್ಲಿನ ಕಲಿಕೆ ನನ್ನಲ್ಲಿ ಕೊಂಚ ವಿಶ್ವಾಸ ಮೂಡಿಸಿತ್ತು. ಯಾರೇ ಆಗಲಿ, ನೃತ್ಯಕ್ಕೆ ಅವಕಾಶ ಕೊಡುವವರೆಗೆ ನಾನು ಬಿಡುತ್ತಿರಲಿಲ್ಲ. ಅವರ ಹಿಂದೆಯೇ ಸುತ್ತುತ್ತ ನನ್ನ ನೃತ್ಯ ನೋಡಿ ಎಂದು ಪೀಡಿಸುತ್ತಿದ್ದೆ. ವೇದಿಕೆಯಲ್ಲಿ ಮೊದಲನೇ ಪ್ರದರ್ಶನ ಕೊಡುವಾಗಲೇ ನನ್ನ ಹೆಸರನ್ನು ನರ್ತಕಿ ನಟರಾಜ್ ಎಂದು ಬದಲಾಯಿಸಿಕೊಂಡಿದ್ದೆ. ಹೀಗೆ ಒಂದು ಕಾರ್ಯಕ್ರಮದಲ್ಲಿ ಚೆನ್ನಾಗಿ ನರ್ತಿಸಿದ ಬಳಿಕ